ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯೆ

82 (565) ಶ್ರೀಮತಿ ಸುಮಾವಸಂತರ ಪರವಾಗಿ ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯಮಟ್ಟದಲ್ಲಿ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು?

ಆ) ಇವುಗಳಲ್ಲಿ ಎಷ್ಟು ಸ್ವಂತ ಕಟ್ಟಡ ಹಾಗೂ ಎಷ್ಟು ಬಾಡಿಗೆ ಕಟ್ಟಡಗಳಿವೆ?

ಇ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

		ಸಮಾಜ ಕಲ್ಯಾಣ ಇಲಾಖೆ	ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಇಲಾಖೆ.
ಅ)	ಮಟ್ರಿಕ್‌ಪೂರ್ವ	705	706
	ಮೆಟ್ರಿಕ್‌ನಂತರ	108	69
		(ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ)	
ಆ)	ಮೆಟ್ರಿಕ್‌ಪೂರ್ವ (ಸ್ವಂತ)	386	253
	ಮೆಟ್ರಿಕ್‌ಪೂರ್ವ (ಬಾಡಿಗೆ)	319	453
	ಮೆಟ್ರಿಕ್‌ನಂತರ (ಸ್ವಂತ)	18	17
	ಮೆಟ್ರಿಕ್‌ನಂತರ (ಬಾಡಿಗೆ)	90	52

ಇ) ಸಮಾಜ ಕಲ್ಯಾಣ ಇಲಾಖೆಯ 41 ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ಕಟ್ಟಡಗಳು ಪೂರ್ಣಾಂತದಲ್ಲಿದೆ. 1991-92ನೇ ಸಾಲಿನಲ್ಲಿ 99 ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಿಗೆ ಹಾಗೂ 4 ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ಕಟ್ಟಲು ಉದ್ದೇಶಿಸಲಾಗಿದೆ. ಉಳಿದ 131 ಮೆಟ್ರಿಕ್‌ಪೂರ್ವ ಮತ್ತು 79 ಮೆಟ್ರಿಕ್‌ನಂತರದ ವಿದ್ಯಾರ್ಥಿಗಳಿಗೆ ಸೂಕ್ತ ನಿವೇಶನ ಮತ್ತು ಆಯವ್ಯಯದಲ್ಲಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಹಂತ ಹಂತವಾಗಿ ಸ್ವಂತ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗುವುದು. ಹಾಗೂ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಪಟ್ಟಂತೆ ಆಯವ್ಯಯದಲ್ಲಿ ಸ್ವಂತ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ-೧

ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ನಡೆಸುವ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಮೆಟ್ರಿಕ್‌ಪೂರ್ವ ಅನುದಾನಿತ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳ ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು				ಒಟ್ಟು				ಅನುದಾನಿತ ನಿಲಯಗಳು				ಮೆಟ್ರಿಕ್ ನಂತರದ ವಿದ್ಯಾರ್ಥಿ				ಖಾಸಗಿ ವಿದ್ಯಾಸಂಸ್ಥೆಗಳ ಮಾನ್ಯತೆ ಪಡೆದು ನಡೆಸುವ ಕಾಲೇಜು ಹಾಸ್ಟಲ್			
		ವಿದ್ಯಾರ್ಥಿ ನಿಲಯಗಳ ಸಂಖ್ಯೆ		ವಿದ್ಯಾರ್ಥಿಗಳ ಸಂಖ್ಯೆ		ವಿದ್ಯಾರ್ಥಿ ನಿಲಯಗಳ ಸಂಖ್ಯೆ		ವಿದ್ಯಾರ್ಥಿ ಗಳ ಸಂಖ್ಯೆ		ವಿದ್ಯಾರ್ಥಿ ನಿಲಯಗಳ ಸಂಖ್ಯೆ		ವಿದ್ಯಾರ್ಥಿ ಗಳ ಸಂಖ್ಯೆ		ವಿದ್ಯಾರ್ಥಿ ನಿಲಯಗಳ ಸಂಖ್ಯೆ		ವಿದ್ಯಾರ್ಥಿ ಗಳ ಸಂಖ್ಯೆ		ನಿಲಯ ಸಂಖ್ಯೆ	ವಿದ್ಯಾರ್ಥಿ ಗಳ ಸಂಖ್ಯೆ		
		ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು																
1.	ಬೆಂಗಳೂರು (ನಗರ)	21	5	1290	300	26	1590	12	918	5	1	775	75	--	–
2.	ಬೆಂಗಳೂರು (ಗ್ರಾ)	22	9	1400	620	31	2020	10	668	1	–	50	–	1	65
3.	ಚಿತ್ರದುರ್ಗ	28	10	1605	420	38	2025	62	13020	20	–	2450	–	3	142
4.	ಕೋಲಾರ	34	14	2133	516	48	2649	3	146	10	1	1025	50	–	–
5.	ತುಮಕೂರು	25	11	1553	515	36	2068	34	1518	20	–	1900	–	–	–
6.	ಶಿವಮೊಗ್ಗ	24	11	1351	410	35	1761	7	263	2	–	200	--	–	--
7.	ಮೈಸೂರು	36	14	2302	893	50	3195	12	901	7	1	930	75	2	225
8.	ಮಂಡ್ಯ	17	12	1157	595	29	1752	6	425	2	–	150	–	1	75
9.	ಹಾಸನ	25	9	1365	447	34	1812	10	381	2	–	135	–	–	–
10.	ಚಿಕ್ಕಮಗಳೂರು	16	8	995	370	24	1365	3	75	3	1	150	50	–	–
11.	ಕೂರ್ಗ್	14	8	779	322	22	1101	–	–	–	–	–	–	–	–
12.	ದಕ್ಷಿಣ ಕನ್ನಡ	24	12	1260	613	36	1873	–	--	1	–	40	–	–	–
13.	ಬೆಳಗಾಂ	20	11	993	367	31	1360	13	794	2	1	200	50	1	50
14.	ಬಿಜಾಪುರ	25	11	1041	560	36	1601	50	1938	2	–	200	–	--	–
15.	ಧಾರವಾಡ	36	16	1868	719	52	2587	17	997	1	1	100	75	2	150
16.	ಉತ್ತರ ಕನ್ನಡ	15	9	665	387	24	1002	1	25	–	–	–	–	–	–
17.	ಬೀದರ್	19	8	1597	464	27	2061	4	165	–	1	–	50	–	–
18.	ಗುಲ್ಬರ್ಗಾ	40	13	2848	580	53	3438	18	1267	16	1	1250	50	–	–
19.	ರಾಯಚೂರು	23	12	1240	480	35	1720	–	–	4	–	275	–	–	–
20.	ಬಳ್ಳಾರಿ	27	11	1694	465	38	2159	8	202	1	1	65	50	1	72
	ಒಟ್ಟು....	491	214	29136	9993	705	39139	270	13643	99	9	9895	525	11	779

ಅನುಬಂಧ – ೨

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಸ್ವಂತ	ಬಾಡಿಗೆ
1.	ಬೆಂಗಳೂರು (ನ)	13	4	1	16
2.	ಬೆಂಗಳೂರು (ಗ್ರಾ)	26	4	5	22
3.	ಬೆಳಗಾಂ	55	4	22	27
4.	ಬಳ್ಳಾರಿ	19	4	6	17
5.	ಬಿಜಾಪುರ	43	4	10	37
6.	ಬೀದರ್	26	2	8	20
7.	ಚಿಕ್ಕಮಗಳೂರು	26	2	12	16
8.	ಚಿತ್ರದುರ್ಗ	38	3	14	27
9.	ದಕ್ಷಿಣ ಕನ್ನಡ	36	6	27	15
10.	ಧಾರವಾಡ	61	5	14	52
11.	ಗುಲ್ಬರ್ಗಾ	62	2	18	46
12.	ಹಾಸನ	22	5	13	20
13.	ಕೊಡಗು	15	2	10	7
14.	ಕೋಲಾರ	39	5	25	19
15.	ಮಂಡ್ಯ	24	3	06	21
16.	ಮೈಸೂರು	43	3	10	36
17.	ರಾಯಚೂರು	37	2	11	28
18.	ಶಿವಮೊಗ್ಗ	45	5	26	24
19.	ತುಮಕೂರು	32	4	17	19
20.	ಉತ್ತರ ಕನ್ನಡ	38	3	13	28
	ಒಟ್ಟು	706	69	268	507

		ಸ್ವಂತ	ಬಾಡಿಗೆ	
1) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	706	253	453	706
2) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು	69	17	52	69
				775

ಶ್ರೀಮತಿ ಮಲ್ಲಾಜಮ್ಮ (ಶ್ರೀಮತಿ ಸುಮಾ ವಸಂತರವರ ಪರವಾಗಿ):- ಇಲ್ಲಿ ಪ್ರಶ್ನೆ ಇರುವುದು ಹಿಂದುಳಿದ ವರ್ಗಗಳ ಹಾಗೂ ಪ.ಜಾತಿ ಮತ್ತು ಪ.ವರ್ಗಗಳ ಹಾಸ್ಟಲುಗಳ ಸಂಖ್ಯೆ, ಜಿಲ್ಲಾವಾರು ಒದಗಿಸಬೇಕೆಂದು, ಇಲ್ಲಿ ಏನು ಹೇಳಿದ್ದಾರೆ, ಸಮಾಜ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ಪೂರ್ವ 705 ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ಮೆಟ್ರಿಕ್ ಪೂರ್ವ ಹಾಸ್ಟಲ್‌ಗಳು 706, ಮೆಟ್ರಿಕ್ ನಂತರ 108 ಮತ್ತೆ 169 ಎಂದು ಹೇಳಿ ಜಿಲ್ಲಾವಾರು ಮಾಹಿತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ವಂತ ಕಟ್ಟಡಗಳೆಷ್ಟು? ಮತ್ತು ಬಾಡಿಗೆ ಕಟ್ಟಡಗಳು ಎಷ್ಟು? ಸ್ವಂತ ಕಟ್ಟಡಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಮತ್ತೆ ಇದಕ್ಕೆ ನಿಗಧಿಯಾದಂಥ ಟೈಮ್ ಬಾಂಡ್‌ನ್ನು ಯಾವತ್ತು ತಾವು ಫಿಕ್ಸ್ ಮಾಡುತ್ತೀರಿ? ಡಾ॥ ಅಂಬೇಡ್ಕರ್ ಜನ್ಮಶತಾಬ್ದಿಯ ಅಂಗವಾಗಿ ತಾವು ಕಳೆದ ಸಾಲಿನಲ್ಲಿ ಜಿಲ್ಲಾವಾರು ಸ್ವಂತ ಕಟ್ಟಡಗಳನ್ನು ಒದಗಿಸುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಸದನದ ಮೂಲಕ ಹೇಳಿದ್ದೀರಿ. ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನತಕ್ಕಂಥದ್ದು ನನ್ನ ಪ್ರಶ್ನೆ.

ಶ್ರೀ ಬಿ. ಶಿವಣ್ಣ:- ಸಾನ್ಯ ಅಧ್ಯಕ್ಷರೇ, 41 ಪ್ರೀ ಮೆಟ್ರಿಕ್ ಹಾಸ್ಟೆಲ್ಸ್ ಕಂಪ್ಲೀಟ್ ಆಗುವಂಥ ಹಂತದಲ್ಲಿದೆ. 409 ಹಾಸ್ಟೆಲ್‌ಗಳ ಕಟ್ಟಡಗಳು ನಮಗೆ ಬೇಕಾಗಿದೆ. ಅದರ ಸಲುವಾಗಿ ಮೂರು ಕೋಟಿ ರೂಪಾಯಿಗಳು

ಬೇಕಾಗುತ್ತದೆ. ಈ ಮೂರು ಕೋಟಿ ರೂಪಾಯಿಗಳ 50 ಪರ್‌ಸೆಂಟನ್ನು ಸೆಂಟ್ರಲ್ ಗೌರ್ನಮೆಂಟ್ ಕೊಡುತ್ತದೆ. ಸೆಂಟ್ರಲ್ ಗೌರ್ನಮೆಂಟ್‌ನವರ ಪ್ಲಾನ್ ಪ್ರಕಾರ ನಾವು ಹಾಸ್ಟೆಲ್‌ಗಳನ್ನು ಕಟ್ಟಿಸುತ್ತಿದ್ದೇವೆ. 99 ಹಾಸ್ಟೆಲ್‌ಗಳನ್ನು ಕನ್ಸ್‌ಟ್ರಕ್ಷನ್ನಿಗೆ ತೆಗೆದುಕೊಳ್ಳಬೇಕು ಎಂದು ಪ್ರೋಗ್ರಾಮನ್ನು ಹಾಕಿದ್ದೇವೆ. ಅದರಲ್ಲಿ 19 ಹಾಸ್ಟೆಲ್‌ಗಳಿಗೆ ನಾವು ಇಲಾಖೆಯಿಂದ ಅಡ್ಮಿನಿಸ್ಟ್ರೇಷನ್ ಅಪ್ರೂವಲ್‌ಗಾಗಿ ಕಳುಹಿಸಿದ್ದೇವೆ. ಅದರಲ್ಲಿ ಎರಡು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಅನುಮತಿ ದೊರಕಿದೆ. ಉಳಿದ 17 ಹಾಸ್ಟಲ್‌ಗಳಿಗೆ ಗೌರ್ನಮೆಂಟ್ ಲೆವಲ್‌ನಲ್ಲಿ ಉಳಿದಿದೆ. 99 ಹಾಸ್ಟೆಲ್‌ಗಳ ಪೈಕಿ 82 ಹಾಸ್ಟೆಲ್‌ಗಳಿಗೆ ಸೂಕ್ತವಾದ ಸೈಟುಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಸೈಟುಗಳು ರೆಡಿಯಾದ ಮೇಲೆ ಅದನ್ನು ಕರ್ನಾಟಕ ಲ್ಯಾಂಡ್ ಆರ್ಮಿಯವರಿಗೆ ನಾವು ಕನ್ಸ್‌ಟ್ರಕ್ಷನ್ ಮಾಡುವ ಸಲುವಾಗಿ ಕೊಡುತ್ತೇವೆ. ಅದಲ್ಲದೆ ಡಾ॥ ಅಂಬೇಡ್ಕರ್‌ರವರ ಸೆಂಟನರಿ ಸೆಲಬರೇಷನ್ ಕಾಲಕ್ಕೆ 48 ಪ್ರಿ ಮೆಟ್ರಿಕ್ ಹಾಸ್ಟೆಲ್, 9 ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳನ್ನು ನಾವು ಸ್ಯಾಂಕ್ಷನ್ ಮಾಡಿದ್ದೇವೆ. ಅದರ ಸಲುವಾಗಿ 3 ಕೋಟಿ 96 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಆ ಪ್ರಕಾರ ನಾವು ಇನ್‌ಫರ್ಮೇಷನ್ನನ್ನು ತೆಗೆದುಕೊಂಡು ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಮಾಡಿ ಫೈನಾನ್ಸ್‌ನ್ನು ರಿಲೀಸ್ ಮಾಡಿ ಕನ್ಸ್‌ಟ್ರಕ್ಷನ್ಸ್ ಮಾಡಿಸುತ್ತೇವೆ ಎಂದು ಹೇಳುತ್ತೇನೆ. 131 ಪ್ರೀ ಮೆಟ್ರಿಕ್ ಹಾಸ್ಟಲ್ಸ್ ಮತ್ತು 79 ಪೋಸ್ಟ್ ಮಟ್ರಿಕ್ ಹಾಸ್ಟಲ್ಸ್ ಇವರ ಬಗ್ಗೆ ಕೂಡ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಹಂತ ಹಂತವಾಗಿ ನಾವು ಹಾಸ್ಟೆಲ್ಸ್ ಕಟ್ಟಡಗಳನ್ನು ಒದಗಿಸಿಕೊಡುತ್ತಿದ್ದೇವೆ.

ಶ್ರೀಮತಿ ಮೀನಾಮಮ್ಮ:- ಮಾನ್ಯ ಅಧ್ಯಕ್ಷರೇ, ಸ್ವಂತ ಕಟ್ಟಡಗಳು 18 ಸಮಾಜಕಲ್ಯಾಣ ಇಲಾಖೆಯಿಂದ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಇಲಾಖೆಯಿಂದ 17 ಎಂದು ಹೇಳಿ ಸಂಖ್ಯೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಮೆಟ್ರಿಕ್ ನಂತರ ಬಾಡಿಗೆಯಿಂದ 90 ಸಮಾಜಕಲ್ಯಾಣ ಇಲಾಖೆಯಿಂದ ಹಾಗೂ 52 ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಎಂದು ಪೇಳಿಕೆ ಕೊಟ್ಟಿದ್ದಾರೆ. ಸ್ವಂತ ಕಟ್ಟಡಗಳು ಇರತಕ್ಕಂಥ ವಿದ್ಯಾರ್ಥಿನಿಲಯಗಳು ಬಹಳ ಹೆಚ್ಚು ಇದ್ದು ರಾಜ್ಯಾದ್ಯಂತ ಮೆಟ್ರಿಕ್ ಹಾಸ್ಟೆಲ್‌ಗಳು ಸರ್ಕಾರದ ಮತಿಯಿಂದ ನಡೆದಿರತಕ್ಕಂಥ ಕಟ್ಟಡಗಳ ಬಹಳ ಕಡಿಮೆ ಇರುವುದರಿಂದ ನೀವು ತಾಲ್ಲೂಕುವಾರು ಅದು ಸೇಗೆಂದರೆ ಕೆಲವು ತಾಲ್ಲೂಕುಗಳಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಸ್ವಂತ ಕಟ್ಟಡಗಳು ಇಲ್ಲವೇ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿದೆ. ದಯಮಾಡಿ ಅದಕ್ಕೆ ಸೂಕ್ತವಾದಂಥ ನಿವೇಶನಗಳನ್ನು ಒದಗಿಸಿಕೊಟ್ಟು ಅವರು ಇರುವ ಹಾಗೆ ಸೂಕ್ತ ವ್ಯವಸ್ಥೆಯನ್ನು ಮಾಡುವುದಕ್ಕೆ ಯಾವಾಗ ತಾವು ಪ್ರಯತ್ನವನ್ನು ಮಾಡುತ್ತೀರಿ?

ಶ್ರೀ ಬಿ. ಶಿವಣ್ಣ:- ಈಗ ಕಟ್ಟಡಗಳ ಬಗ್ಗೆ ಹೇಳಿದ್ದೇನೆ. ಎಲ್ಲೆಲ್ಲಿ ಸ್ವಂತ ಕಟ್ಟಡಗಳು ಇಲ್ಲವೋ ಅಲ್ಲಿ ರೆಂಟೆಡ್ ಬಿಲ್ಡಿಂಗ್‌ಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಆದರೆ ಪೆಜ್ಜಣಿ ರೆಂಟಲ್ ಹಾಸ್ಟೆಲ್‌ಗಳಿಗೆ ಬೇಕಾದಂಥ ಬಿಲ್ಡಿಂಗ್‌ಗಳು ಸಿಗುವುದಿಲ್ಲ, ಬಹಳ ತೊಂದರೆಯಾಗುತ್ತಿದೆ. ತಾಲ್ಲೂಕು ಲೆವಲ್‌ನಲ್ಲಿ, ಹೋಬಳಿ ಲೆವಲ್‌ನಲ್ಲಿ ಆದರೂ ಕೂಡ ಸರ್ಕಾರ ಹಣದ ವ್ಯವಸ್ಥೆಯನ್ನು ಮಾಡಿ ಹಾಸ್ಟೆಲ್ ಗಳನ್ನು ಕನ್ಸ್‌ಟ್ರಕ್ಷನ್ನನ್ನು ಮಾಡಿಸುತ್ತೇವೆ. ಆದರೆ ಅಷ್ಟು ತೀವ್ರಗತಿಯಿಂದ ಆಗುವುದಿಲ್ಲ. ಎಲ್ಲೆಲ್ಲಿ ಕಟ್ಟಡಗಳು ಇಲ್ಲ ಎಂದರೆ ಅಲ್ಲಿ ರೆಂಟೆಡ್ ಬಿಲ್ಡಿಂಗ್ಸ್‌ಗಳನ್ನು ತೆಗೆದುಕೊಂಡು ಹಾಸ್ಟೆಲ್‌ಗಳನ್ನು ನಡೆಸುವ ಪ್ರಯತ್ನವನ್ನು ಮಾಡುತ್ತೇವೆ. ಈ ರೀತಿ ಹಂತ ಹಂತವಾಗಿ ಬಿಲ್ಡಿಂಗ್‌ಗಳನ್ನು ಒದಗಿಸುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು, ಬಹಳಷ್ಟು ಎಸ್.ಸಿ. ಮತ್ತು ಎಸ್.ಟಿ.ಹಾಸ್ಟೆಲ್ಸ್‌ಗಳು ಏನು ಇವೆ, ಅಲ್ಲಿ ಕುಡಿಯುವ ನೀರಿನ ಅಭಾವ ಇದೆ. ಏಕೆಂದರೆ ಹಾಸ್ಟೆಲ್‌ಗಳ ಕಟ್ಟಡಗಳನ್ನು ಕಟ್ಟುವಾಗ ಯಾವುದೇ ಪ್ರಾವಿಷನ್ ಇಲ್ಲದೇ ಒಂದು ಬೋರ್‌ವೆಲ್‌ನ್ನು ಕೂಡ ಡ್ರಿಲ್ ಮಾಡುವುದಕ್ಕಾಗುವುದಿಲ್ಲ. ಓಪನ್ ವೆಲ್ ಕೂಡ ಮಾಡುವುದಿಲ್ಲ, ಸಾಮಾನ್ಯವಾಗಿ ನಾವು ನೋಡಿದಂತೆ ಹಾಸ್ಟೆಲ್‌ಗಳನ್ನು ತೆಗೆಯುವುದು ಊರಿನಿಂದ ಬಹಳ ದೂರ ಇರುತ್ತದೆ. ಪಾಗಾಗಿ, ಕಡ್ಡಾಯವಾಗಿ ಈ ಹಾಸ್ಟೆಲ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಬೋರ್‌ವೆಲ್ ಅಥವಾ ಓಪನ್ ಡ್ರಿಲ್‌ನ್ನು ಮಾಡುವುದಕ್ಕೆ ತಾವು ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ:- ಈಗಾಗಲೇ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದರೂ ನೀರು ಪೂರೈಕೆ ಮಾಡುವುದು ಮತ್ತು ಹಾಸ್ಟೆಲ್‌ನಲ್ಲಿ ನೀರನ್ನು ಒದಗಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದಕ್ಕೆ

ತಮ್ಮ ಸಲಹೆಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಪ್ರೈವೇಟ್ ಹಾಸ್ಟೆಲ್‌ಗಳು ಇದ್ದರೆ ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಯಾವ ಹಾಸ್ಟೆಲ್‌ನಲ್ಲಿಯೂ ನೀರು ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಎಷ್ಟೋ ಕಡೆ ಬಹಳ ಕಷ್ಟವಾಗಿದೆ ಎಷ್ಟೋ ಕಡೆ ನೀರಿಲ್ಲ. ನಾನು ನಮ್ಮ ಊರಿನಲ್ಲಿ ಮೊನ್ನೆ ಡಿ.ಸಿ. ಯವರಿಗೆ ಹೇಳಿ ಬೋರ್‌ವೆಲ್ ಅನ್ನು ತೆಗೆಸಿದೆ. ಆದಕ್ಕೆ ಅರ್ಧ ಕಿ.ಮೀ. ದೂರವಿದೆ. ಪೈಪ್‌ನಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ನೀವು ಪ್ಲಾನ್ ಎಸ್ಟಿಮೇಟ್ ಮಾಡುವಾಗ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ವಿಶ್ವನಾಥಯ್ಯ:- ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳು ಏನಿವೆ ಅವುಗಳಲ್ಲಿ ಕಟ್ಟಡ ಇಲ್ಲದೆ ಇರತಕ್ಕ ವಿದ್ಯಾರ್ಥಿನಿಲಯಗಳಿಗೆ ಇಂತಿಷ್ಟು ದಿವಸದೊಳಗಾಗಿ ಕಟ್ಟಡವನ್ನು ಕಟ್ಟಿಸಲಿಕ್ಕೆ ಸರ್ಕಾರ ಯಾವುದಾದರೂ ಯೋಜನೆಯನ್ನು ಹಾಕಿಕೊಂಡಿದೆಯೋ? ಹಾಗಿದ್ದರೆ ಅದರ ವಿವರ ಏನು?

ಶ್ರೀ ಬಿ. ಶಿವಣ್ಣ :- ೧೯೯೧-೯೨ರಲ್ಲಿ ೫೦ ಲಕ್ಷ ರೂಪಾಯಿಗಳು ನಮ್ಮ ಹತ್ತಿರ ಇತ್ತು . ಅದರ ಪ್ರಕಾರ...

ಶ್ರೀ ಹೆಚ್. ವಿಶ್ವನಾಥಯ್ಯ:- ಕಟ್ಟಡಗಳು ಇಲ್ಲದೆ ಇರುವಂಥಹ ವಿದ್ಯಾರ್ಥಿ ನಿಲಯಗಳು ಎಷ್ಟಿವೆ ಅವುಗಳೆಲ್ಲವುಗಳಿಗೂ ಸಹ ಎಷ್ಟು ವರ್ಷಗಳ ಅವಧಿಯಲ್ಲಿ ನೀವು ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಏನಾದರೂ ಆಲೋಚನೆ ಇದೆಯೇ ಇದ್ದರೆ ಏನು?

ಶ್ರೀ ಶಿವಣ್ಣ:- ಹಂತ ಹಂತವಾಗಿ ಅವುಗಳನ್ನು ನಾವು ಕಟ್ಟಿಸಬೇಕಾಗುತ್ತದೆ. ನಮಗೆ ಕೊಟ್ಟಿರುವ ಬಜೆಟ್ ಮುಖಾಂತರ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕಿಂತ ನಾವು ಹೆಚ್ಚಿಗೆ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ:- ನನ್ನ ಪ್ರಶ್ನೆ ಏನೆಂದರೆ ನಿರ್ದಿಷ್ಟವಾದಂತಹ ಅವಧಿಯಲ್ಲಿ ಏನಾದರೂ ಯಾವ್ಯಾವ ವಿದ್ಯಾರ್ಥಿನಿಲಯಗಳಲ್ಲಿ ಕಟ್ಟಡಗಳು ಇಲ್ಲ, ಅಲ್ಲಿ ಕಟ್ಟಡಗಳನ್ನು ಒದಗಿಸಲಿಕ್ಕೆ ಸರ್ಕಾರ ಯೋಜನೆಗಳನ್ನೂ ಹಾಕಿಕೊಂಡಿದೆಯೇ?

ಶ್ರೀ ಬಿ. ಶಿವಣ್ಣ:- ಅದು ಬಜೆಟ್‌ನ ಮೇಲೆ ಅವಲಂಬಿತವಾಗಿದೆ. ನಮಗೆ ಹಣ ಸಿಕ್ಕರೆ ನಾವು ಮಾಡಬಹುದೇ ಹೊರತು...

ಶ್ರೀ ವಾಟಾಳ್ ನಾಗರಾಜ್:- ಸರ್ಕಾರದ ನೀತಿ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ಇರತಕ್ಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದವರ್ಗದವರ ಹಾಸ್ಟೆಲ್‌ಗಳು ಏನಿವೆ ಅವುಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಬೇಕೆಂದು ಹೇಳಿ ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದಾಗ ಕೇಂದ್ರ ಸರ್ಕಾರದಿಂದ ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಸುಮಾರು 10-12 ಕೋಟಿ ರೂಪಾಯಿಯನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ಒಂದು ಯೋಜನೆಯನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೆವು. ಕಳೆದ ಮೂರು ವರ್ಷಗಳಿಂದ ಅದು ನೆನೆಗುದಿಗೆ ಬಿದ್ದಿದೆ. ಅದನ್ನು ಯಾರೂ ಸಹಿತ ಫಾಲೋ ಆಪ್ ಮಾಡಿಲ್ಲ. ನಾನು ಮೊನ್ನೆ ದೆಹಲಿಗೆ ಹೋಗಿದ್ದಾಗ ಅಲ್ಲಿರತಕ್ಕ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ನಿಮ್ಮ ಸರ್ಕಾರ ಬಂದ ಮೇಲೆ ಈ ಸರ್ಕಾರದಿಂದ ಕಾರ್ಯದರ್ಶಿಗಳು ಅಲ್ಲಿಗೆ ಒಂದು ರಿಮೈಂಡರ್ ಸಹಿತ ಕಳುಹಿಸಿಲ್ಲ. ದುಡ್ಡಿಲ್ಲ ಎಂದು ಹೇಳಿದರೆ ಮತ್ತೆ ಎಲ್ಲಿಂದ ಕಟ್ಟುತ್ತೀರಿ? ನೀವು ಆಮ ವೇಗದಲ್ಲಿ 50 ಲಕ್ಷ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಡುತ್ತೇವೆಂದು ಹೇಳಿದರೆ 500 ಹಾಸ್ಟಲ್‌ಗಳಿಗೆ 15 ವರ್ಷಗಳು ಬೇಕಾಗುತ್ತವೆ. ನಾನು ಈ ಸರ್ಕಾರಕ್ಕೆ ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುವುದೇನೆಂದರೆ, ಅಲ್ಲಿರತಕ್ಕ ಹಾಡುಗರುಗಳು ಒಂದು ವರ್ಷಕ್ಕೆ ನಾಲ್ಕು ಸಾರಿ ಸ್ನಾನ ಮಾಡುತ್ತಾರೆ. ಸಂಕ್ರಾಂತಿ ಹಬ್ಬಕ್ಕೆ ಒಂದು ದಿನ, ಯುಗಾದಿ ಹಬ್ಬದಲ್ಲಿ ಒಂದು ದಿನ, ದಸರಾ ಹಬ್ಬದಲ್ಲಿ ಒಂದು ದಿನ, ಸ್ನಾನಮಾಡುತ್ತಾರೆ. ಆಮರು ಕುಂಟೆಗಳಲ್ಲಿ ಕೆರೆಗಳಲ್ಲಿ ಹೋಗಿ ಸ್ನಾನ ಮಾಡಬೇಕು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ 250 ಬೋರ್‌ವೆಲ್‌ಗಳನ್ನು ಮಂಜೂರು

ಮಾಡಲು ನಿಮಗೆ ಎಷ್ಟು ಹಣ ಬೇಕು? ಒಂದು ಕೋಟಿ ರೂಪಾಯಿಯು ನಿಮಗೆ ಬೇಕಾಗಿಲ್ಲ, ದಯವಿಟ್ಟು ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಹೇಳಿ ನಮ್ಮ ಹತ್ತಿರ ದುಡ್ಡಿಲ್ಲ ಅಂದರೆ ಹೇಗಾಗುತ್ತದೆ. ಆ ಹುಡುಗರಿಗೆ ಕುಡಿಯಲಿಕ್ಕೆ ನೀರಿಲ್ಲ. ಮೂರು ತಿಂಗಳಿಗೊಂದು ಸಾರಿ ಅವರು ಸ್ನಾನ ಮಾಡುತ್ತಿದ್ದಾರೆ ಕೊನೆಯ ಪಕ್ಷ ನೀವು ಈ ವರ್ಷ ಬೇರೆ ಏನು ಮಾಡದಿದ್ದರೂ ಸಹಿತ ರಾಜ್ಯಸರ್ಕಾರದ ಯಾವುದಾದರೂ ನಿಧಿಯಿಂದ 250 ಬೋರ್‌ವೆಲ್‌ಗಳನ್ನು ಹಾಕಿಕೊಡುತ್ತೇವೆ ಎನ್ನುವಂತಹ ಭರವಸೆಯನ್ನಾದರೂ ಕೊಡಿ.

ಶ್ರೀ ಬಿ. ಶಿವಣ್ಣ:- ನೀರನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. 25-30 ವರ್ಷಗಳಿಂದಲೂ ಈ ಹಾಸ್ಟಲ್‌ಗಳು ಇವೆ. ಸಾವಿರ ಹಾಸ್ಟಲ್‌ಗಳು ಇವೆ. ಆ ಸಾವಿರ ಹಾಸ್ಟಲ್‌ಗಳಿಗೆ ಒಂದೇ ಸಾರಿ ಬಿಲ್ಡಿಂಗ್ ಅನ್ನು ಒದಗಿಸಲು ಆಗುವುದಿಲ್ಲ, ನೀರಿನ ವ್ಯವಸ್ಥೆಯನ್ನು ಒದಗಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಬರೀ ನೀರಿನ ವ್ಯವಸ್ಥೆ ಒಂದೇ ಅಲ್ಲ ಆ ಹಾಸ್ಟಲ್‌ಗಳು ನರಕ ಇದ್ದಹಾಗೆ ಇವೆ. ಎಲ್ಲೆಲ್ಲಿ ಇವರು ಹಾಸ್ಟಲ್‌ಗಳು ನಡೆಸುತ್ತಿದ್ದಾರೆ ಅಲ್ಲಿಗೆ ಒಂದು ಸಾರಿ ತಾವು ಹೋಗಿ ನೋಡಬೇಕು ಅಲ್ಲಿ ಸಂಪೂರ್ಣವಾಗಿ ನರಕವಾಗಿದೆ. ಬೇರೆ ಮಾತೇ ಇಲ್ಲ, ನರಕಕ್ಕೆ ಹೋಗಬೇಕಾದರೆ ಈ ಹಾಸ್ಟೆಲ್‌ಗಳಿಗೆ ಹೋಗಬೇಕು. ಅಲ್ಲಿ ತಿಗಣೆ ಕಾಟವನ್ನು ತಡೆದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ.

ರೇಷ್ಮೆ ಇಲಾಖೆಯಲ್ಲಿ ಮಹಿಳೆಯರಿಗೆ ವಿಶೇಷ ಯೋಜನೆ

84 (494). ಶ್ರೀ ಡಿ. ಶಿವರಾಮ್ (ಗಂಡಸಿ):- ಮಾನ್ಯ ರೇಷ್ಮೆ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮಹಿಳೆಯರಿಗಾಗಿ ರೇಷ್ಮೆ ಇಲಾಖೆಯಲ್ಲಿ ಯಾವುದಾದರೂ ವಿಶೇಷ ಘಟಕ ಯೋಜನೆ ಇದೆಯೇ?

ಆ) ಯೋಜನೆ ಇದ್ದಲ್ಲಿ ಈ ಯೋಜನೆಯಲ್ಲಿ ಒದಗಿಸಿರುವ ಹಣವಷ್ಟು? ಹಾಗೂ ತೆಗೆದುಕೊಂಡಿರುವ ಯೋಜನೆಗಳಾವುವು?

ಇ) ಈ ಯೋಜನೆಯಡಿಯಲ್ಲಿ ಯಾವುದಾದರೂ ಬೇಡಿಕೆ ಹಾಸನ ಜಿಲ್ಲೆಯಿಂದ ಬಂದಿದೆಯೇ?

ಈ) ಬಂದಿದ್ದಲ್ಲಿ ಅವುಗಳು ಯಾವ ಹಂತದಲ್ಲಿವೆ? ಮತ್ತು ಅವುಗಳನ್ನು ನಿಯಂತ್ರಿಸುತ್ತಿರುವ ಅಧಿಕಾರಿ ಯಾರು?

ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):-

ಅ) ಹೌದು.

ಆ) ರಾಷ್ಟ್ರೀಯ ರೇಷ್ಮೆ ಯೋಜನೆಯಡಿಯಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಮಹಿಳಾ ಸಂಘಗಳು ಹಾಗೂ ಮಹಿಳಾ ಮಂಡಳಿಗಳಿಗೆ, ರಾಷ್ಟ್ರದ 5 ಸಾಂಪ್ರದಾಯಿಕ ರೇಷ್ಮೆ ಕೃಷಿ ರಾಜ್ಯಗಳಿಗೆ ಹಾಗೂ 17 ನೂತನ ರೇಷ್ಮೆ ರಾಜ್ಯಗಳಿಗೆ ಒಟ್ಟು 370 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ಹಣವನ್ನು ರಾಜ್ಯಗಳಿಗೆ ಯೋಜನೆಗಳ ಆಧಾರದ ಮೇಲೆ ಕೇಂದ್ರ ರೇಷ್ಮೆ ಮಂಡಳಿ ಒಪ್ಪಿಗೆ ನೀಡಿ ಬಿಡುಗಡೆ ಮಾಡುತ್ತದೆ. ಯೋಜನೆಗಳು ಹಿಪ್ಪು ನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆಗೆ ಸಂಬಂಧಪಟ್ಟವುಗಳಾಗಿರಬೇಕು.

ಇ) ಹೌದು

ಈ) 1) ಶ್ರೀ ಶಕ್ತಿ ಮಹಿಳಾ ಮಂಡಳಿ, ಹಾಸನ ಯೋಜನೆ: "ರೇಷ್ಮೆ ನೂಲು ಬಿಚ್ಚುವುದರಲ್ಲಿ ಮಹಿಳೆಯರಿಗೆ ತರಬೇತಿ ನೀಡುವುದು " ಯೋಜನೆಗೆ ಮಂಜೂರಾತಿ ನೀಡಲಾಗಿದೆ.

2) ಶ್ರೀ ರಾಘವೇಂದ್ರ ರೇಷ್ಮೆ ನೂಲು ಬಿಚ್ಚುವ ಮಹಿಳಾ ಮಂಡಳಿ,ಚನ್ನರಾಯಪಟ್ಟಣ ಯೋಜನೆ: "ನೂಲು ಬಿಚ್ಚಾಣಿಕೆ ಘಟಕ ಸ್ಥಾಪನೆ" ಈ ಯೋಜನೆ ಬಗ್ಗೆ ಕೆಲವು ವಿವರಗಳು ಬೇಕಾಗಿವೆ. ಅವು ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.